ಆ) ಹಾಗಿದ್ದಲ್ಲಿ ಕಾಮಗಾರಿಯನ್ನು ಯಾವಾಗ ಕೈಗೆತ್ತಿಕೊಳ್ಳಲಾಗುವುದು;

ಇ) ಕೈಗೆತ್ತಿಕೊಳ್ಳದಿದ್ದಲ್ಲಿ ವಿಳಂಬವಾಗಲು ಕಾರಣಗಳೇನು;

ಈ) ಈ ಘಟಕಗಳನ್ನು ಪ್ರಾರಂಭಿಸಲು ಕಾಮಗಾರಿಯನ್ನು ಯಾವಾಗ ಕೈಗೊಳ್ಳಲಾಗುತ್ತದೆ?

ಶ್ರೀ ಆರ್. ಬಿ. ತಿಮ್ಮಾಪುರ್ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) :

ಅ) ವಿಜಾಪುರ ಜಿಲ್ಲೆ ಬಸವನ ಬಾಗೇವಾಡಿಯಲ್ಲಿ ಸಂಸ್ಕರಣ ಘಟಕ- ಶೀಥಲೀಕರಣ ಉಗ್ರಾಣ ಸ್ಥಾಪನೆಗೆ ಉದ್ದೇಶಿಸಿರುವುದಿಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಪ್ರಶ್ನೆ ಉದ್ಭವಿಸುವುದಿಲ್ಲ.

ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ ರೈತರಿಗೆ ಹಣ ಪಾವತಿಸಲು ವಿಳಂಬವಾಗುತ್ತಿರುವುದು

876 (1011) ಶ್ರೀ ಬನ್ನಿಕೋಡ್ ಬಿ. ಹೆಚ್. (ಹಿರೇಕೆರೂರು) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಹಕಾರಿ ಸಕ್ಕರೆ ಕಾರ್ಖಾನೆಗಳು ರೈತರಿಂದ ಖರೀದಿಸಿದ ಕಬ್ಬಿಗೆ ಹಣ ಪಾವತಿಸಲು ವಿಳಂಬ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಈ ವಿಳಂಬಕ್ಕೆ ಕಾರಣಗಳೇನು?

ಆ) ಕಬ್ಬನ್ನು ಪೆಟ್ರೋಲ್ ಹಾಗೂ ಡೀಸೆಲ್ ಉತ್ಪಾದನೆಗೆ ಉಪಯೋಗಿಸುವ ಹೊಸ ವೈಜ್ಞಾನಿಕ ಶೋಧನೆ ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಈ ಬಗ್ಗೆ ವೈಜ್ಞಾನಿಕ ಶೋಧನೆ ಮಾಡಲು ಸರ್ಕಾರ ಆಲೋಚನೆ ಮಾಡಿದೆಯೇ?

ಶ್ರೀ ಡಿ.ಕೆ. ಶಿವಕುಮಾರ್ (ಸಹಕಾರ ಸಚಿವರು) :

ಅ) ಕಬ್ಬು ಸರಬರಾಜು ಮಾಡಿದ ರೈತರಿಗೆ ಕಾರ್ಖಾನೆಯವರು ಬಿಲ್ಲು ಪಾವತಿಸುವಲ್ಲಿ ವಿಳಂಬವಾಗುತ್ತಿರುವುದು ಗಮನಕ್ಕೆ ಬಂದಿರುತ್ತದೆ. ಇತ್ತೀಚೆಗೆ ಸಕ್ಕರೆ ಬೆಲೆಯು ಇಳಿಮುಖವಾಗಿರುವುದರಿಂದ ಸಕ್ಕರೆಯ ಮಾರಾಟದ ನಿರಂತರ ಪ್ರಕ್ರಿಯೆಯಲ್ಲಿ ವ್ಯತ್ಯಯ ಉಂಟಾಗಿರುವುತ್ತದೆ. ಇದರಿಂದ ಕಬ್ಬು ಸರಬರಾಜುದಾರರಿಗೆ ಹಣ ಪಾವತಿಸುವಲ್ಲಿ ವಿಳಂಬವಾಗಿದ್ದುಂಟು. ಈಗ ಪರಿಸ್ಥಿತಿಯು ಸುಧಾರಿಸಿದ್ದು ಎರಡು ಮೂರು ಕಾರ್ಖಾನೆಗಳನ್ನು ಬಿಟ್ಟರೆ ಎಲ್ಲಾ ಕಾರ್ಖಾನೆಗಳು ಹಿಂದಿನ ವರ್ಷದ ಬಾಕಿಯನ್ನು ತೀರುವಳಿ ಮಾಡಿರುತ್ತವೆ.

ಆ) ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಈಗಾಗಲೇ ಈ ವಿಷಯವಾಗಿ ಮೈಸೂರು ಸಕ್ಕರೆ ಕಾರ್ಖಾನೆಯಲ್ಲಿ ಪ್ರಾರಂಭಿಕ ಪ್ರಯೋಗ ನಡೆದಿದ್ದು ಇನ್ನು ಒಂದು ಹಂತ ತಲುಪಿರುವುದಿಲ್ಲ.

ಇ) ಈ ದಿಸೆಯಲ್ಲಿ ಮೈಸೂರು ಸಕ್ಕರೆ ಕಾರ್ಖಾನೆಯಲ್ಲಿ ಈ ಬಗ್ಗೆ ಪ್ರಾರಂಭಿಕ ಪ್ರಯತ್ನಗಳು ನಡೆದಿವೆ.